# 01 Karnataka Power Transmission Corporation Limited
## Departmental Examination – December 2020
## SAS PART-I PAPER -1
**(English/Kannada-Precise Writing & Drafting)**
**(Books, Guide, Notes etc. Are Not Allowed)**

**Date : 14.12.2020** **Maximum Marks : 100** **Time : 9:30 am TO 12:30 pm**

---

## PART-A

**1. Write a precise of the following Passage in about one-third of its length in your own words with a suitable title. 10**

There are two considerations which deserve at least a word in any discussion of the future of the Indian theatre. The first is the rapid development of the cinema as a competitive for prophesied favour. At first, in the early flush of cinematic triumph people—some of whom might have been expected to, know better—prophesies the extinction of the theatre. It is now clear that though here and there, temporarily, the theatre may be affected, the cinema cannot hope to replace the stage and elbow it out of existence. Experience in the West has shown that the stage will always be required as a federal studio. For the technique is different and great stage actors have, always, to their disgust, discovered that film acting is at least only second best to them; it cannot mean to them what the stage means. Something is lacking in the human touch. In the theatre heart responds to heart and mind acts on mind in a way unknown to the cinema. Thus there is no danger of extinction to the theatre. On the other hand, the rivalry of the screen ought to and will put theatre to a new test and give it a new stimulus that may well lead to still higher planes of artistic achievement. Finally, a word about a national language spoken, written and thought might do for the theatre in India.

With the new awakening in social life the need of a common tongue is being increasingly felt. Much work is being done to bring out a common linguistic medium. The day when, it is accepted will be a great day for the Indian theatre, as it will be for all art in the country. But the theatre, because its life blood is spoken word, will gain most. With a common tongue, with a live national consciousness, the theatre will become to its own as definite instrument of national unity reflecting the national mind, interpreting the national heart and dreaming national dreams for the future

**2. Read the following passage and answer the questions given below in your own words**

The Artist co-operates with God in making increasingly larger numbers of people see the beauty of the world which these people could never see for themselves. The world is, of course, God's artistic masterpiece; but it is the artist who lends people eyes to see it with. Browning's Fra Lippo has the last word on the subject:-

For, don't you mark; we're made so that we love
First when we see them painted, things we have passed
Perhaps a hundred times nor cared to see?

In this sense, Oscar Wilde's paradox is perfectly true: that Nature imitates Art; for the majority of men see in Nature what Art has taught them to see in Nature. The fogs of London, said Wilde, were the invention of Whistler. To love beauty therefore becomes to the artist, as an artist, his first duty. To love beauty, that is, to see it for himself first, and then to communicate it to others; for love implies at once vision and reproduction. It must be the first article in an artist's creed, as an artist, that beauty is the best interpreter of God to man; that, when he has got hold of beauty, he has got hold of the surest key to the knowledge of God. Keats has said that Beauty is Truth. Now, this is not true. But to us here, Beauty is, as Plato said, the splendour of Truth. The artist, as an artist, must be content with the splendour and, through this splendour strive to convey the truth. He has no business with truth as such as the philosopher, for instance, has. He has no concern with conduct as such, as the moralist, for instance, has. It is not his function to exhort men to good works, or to prove things; but merely to exhibit them. Plato thought a picture, for instance, was just a copy of an object - a copy of the idea. It was Aristotle, Plato's pupil, who pointed out that, though a picture was in one sense certainly a copy and therefore something less than the object, in another sense it was something more than the object. It was, briefly, the idea of the object made visible to the eye. Art, therefore, does not consist merely in line and colour, sound and image; but primarily in ideas. Beauty may not be useful. Beauty may not improve our minds. But beauty must please. Indeed, such is the inherent delightfulness of beauty that, by its magic touch, not only the ugly becomes pleasureable, but even sorrow becomes a joy. That is the explanation of the pleasure we feel in tragedy. What would shock us in actual life gives us pleasure in a tragedy. For tragedy makes experience significant; and by making it significant, it makes it beautiful; and by making it beautiful, it makes it pleasant. And yet, it does not aim at pleasing; it only aims at exhibiting. Pleasure is not its aim; it is its effect.
- Armando Menezes

**Questions:** **10**

**a)** What does the artist do for most of us?
**b)** Why does the artist “lend” his eyes to people?
**c)** What is the artist's first duty? Why?
**d)** What is the artist's real function?
**e)** When does sorrow becomes a joy?

**3. Change the following sentences from Active voice to Passive voice:-** **5**

**a)** He scored twenty runs.
**b)** He made a very remarkable discovery.
**c)** They opened the theater only last month.
**d)** The Manager will give a ticket.
**e)** He kept me waiting.

**4. Insert the correct Tense of Verb in the following:-** **5**

**a)** She has bought some cloth; she --- herself a blouse. (will make, is going to make)
**b)** This book is not long. I --- it by lunch time, (will be reading, have read)
**c)** I know all about that film because I _____ it twice. (saw, have seen, had seen)
**d)** As soon as he ______ the news, he wrote to me (to hear)
**e)** Whenever we _____, we talk of our school days (to meet)

5. **Fill in the blanks** **5**

**a)** He was born ------a small village-------Malabar ( With appropriate preposition)

**b)** April is____ fourth month of year. ( With appropriate article)

**c)** Iron is more useful than copper.
The superlative degree of this sentence is -------------------

**d)** _____Andamans are group of islands in Bay of Bengal. (With appropriate article)

**e)** He remained at home ------he was ill. (With appropriate conjunction)

6. **Translate the following to Kannada** **5**

The great advantage of early rising is the good start it gives us in our day's work. The early riser has done a large amount of hard work before other men have got out of the bed. In the early morning the mind is fresh, and there are few sounds or other distractions so that work done at that time is generally well done. In many cases the early riser also finds time to take some exercise in the fresh morning air, and this exercise supplies him with a fund of energy that will last until the evening.

7. **Join each pair of the following sentences by a suitable Conjunction:-** **5**

**a)** Rama reads for pleasure. Hari reads for profit.
**b)** We decided to set out. It was late.
**c)** My brother was not there. My sister was not there.
**d)** The prisoner fell down on his knees. The prisoner begged for mercy.
**e)** It is autumn. The leaves are falling.

8. **Give two Synonyms for each of the following words:-** **5**

**a)** Fair
**b)** Happy
**c)** Lucky
**d)** Rich
**e)** True

## PART B

9. Draft a Corporate office Order from Director(A&HR), KPTCL to all the concerned regarding enhancement of compensation payable in case of fatal/non-fatal electrical accidents to non-departmental persons and payment of solatium to owners of animals that die of electrocution **10**

10. Draft a 'Warning Notice' from Executive Engineer of BESCOM against Sri.Y, Assistant working in Division office for his unauthorized absence from duty for 2 days. **10**

11. Draft a Special Audit Report from Accounts Officer(I/A) and Team of 'X' O&M Division on misappropriation of cash in 'Y' O&M Sub Division. **10**

12. Draft a circular from Deputy General Manager (tech), KPTCL to all the Transmission Zones regarding the process of procurement of suitable Government land, which has a clear title, for the construction of substations. **10**

**13.** Draft a letter to all the General Manager (A&HR) of all ESCOMS, PCKL, and CEE, of all the Transmission Zones of KPTCL, regarding the deduction of contribution payable to Labour Welfare Department, from the salary of the employees **5**

**14.** Draft an Official Memorandum from Asst. Executive Eng (El.), Vidhana Soudha Sub Division, BESCOM, regarding transfer of installation from the name of 'X' consumer to the name of 'Y' consumer., **5**

# ಕನ್ನಡ

# ಭಾಗ–ಎ

**1. ಈ ಕೆಳಕಂಡ ಗದ್ಯಭಾಗವನ್ನು 3ನೇ ಒಂದರಷ್ಟಕ್ಕೆ ಸಂಕ್ಷಿಪ್ತಗೊಳಿಸಿ. ಸೂಕ್ತ ಶಿರೋನಾಮೆ ಬರೆಯಿರಿ** **10**

ರಾಜಸ್ಥಾನದಲ್ಲಿ ಮಿಡತೆಗಳು ಬಿರುಗಾಳಿಯಂತೆ ದಾಳಿ ಮಾಡಿವೆ. ಈ ಬಾರಿ ಗ್ರಾಮೀಣ ಪ್ರದೇಶದ ಹೊಲಗಳನ್ನೆಲ್ಲ ಮುಕ್ಕಿ ಮುಗಿಸಿ, ರಾಜಧಾನಿ ಜೈಪೂರಕ್ಕೂ ದಾಳಿ ಮಾಡಿದ್ದು, ವಸತಿ ಪ್ರದೇಶಗಳಲ್ಲಿ ದೂಳಿನ ಮೋಡಗಳಂತೆ ಗುಂಪಾಗಿ ನೆರೆದಿರುವ ಚಿತ್ರಗಳು, ವಿಡಿಯೋಗಳನ್ನು ಅಲ್ಲಿನ ನಿವಾಸಿಗಳು ಹಂಚಿಕೊಳ್ಳುತ್ತಿದ್ದಾರೆ. ಅಕ್ಕಪಕ್ಕದ ಮಧ್ಯಪ್ರದೇಶ ಹಾಗೂ ಉತ್ತರಪ್ರದೇಶಗಳು ಕೂಡ ಮಿಡತೆ ದಾಳಿಗೆ ತುತ್ತಾಗಿವೆ. ಪಂಜಾಬ್ ಮತ್ತು ಗುಜರಾತ್‌ಗಳ ರೈತರಿಗೆ ಕೂಡ ಈ ಮಿಡತೆ ದಾಳಿ ಎಚ್ಚರಿಕೆ ನೀಡಲಾಗಿದೆ. ಅಲೆ ಅಲೆಯಾಗಿ ಬರುವ ಈ ಮಿಡತೆಗಳು ಒಂದು ದಿನದಲ್ಲಿ 150 ಕಿಲೋಮೀಟರ್ ದೂರ ಹಾರಬಲ್ಲವು. ಒಂದು ಮಿಡತೆ ಒಂದು ದಿನದಲ್ಲಿ ತನ್ನಷ್ಟೇ ತೂಕದ ಆಹಾರ ನುಂಗಬಲ್ಲದು. ಒಂದು ಚದರ ಕಿಲೋಮೀಟರ್ ವ್ಯಾಪ್ತಿಯಲ್ಲಿ ಹರಡಿಕೊಂಡ ಈ ಮಿಡತೆಗಳ ಸೈನ್ಯ ಒಂದು ದಿನದಲ್ಲಿ ಸುಮಾರು 35,000 ಮಂದಿ ತಿನ್ನುವಷ್ಟು ಆಹಾರಧಾನ್ಯವನ್ನು ಮುಕ್ಕಿ ಮುಗಿಸಬಲ್ಲವು ಎಂದು ತಜ್ಞರು ಹೇಳಿದ್ದಾರೆ. ಕೊರೊನಾ ವೈರಸ್‌ನಿಂದ ಉಂಟಾಗಿರುವ ಲಾಕ್‌ಡೌನ್ ಸನ್ನಿವೇಶದಿಂದ ನಷ್ಟ ಅನುಭವಿಸಿರುವ ರೈತರು, ಈಗ ಮಿಡತೆಗಳ ದಾಳಿಯ ಬವಣೆಯನ್ನು ಕಾಣಬೇಕಾಗಿ ಬಂದಿದೆ.

ಮಿಡತೆಗಳು ಸಹಜ ಸ್ಥಿತಿಯಲ್ಲಿ ನಿರುಪದ್ರವಿ ಕೀಟಗಳು. ಕಡಿಮೆ ಸಂಖ್ಯೆಯಲ್ಲಿದ್ದಾಗ ಇವುಗಳಿಂದ ಏನೇನೂ ಹಾನಿಯಿಲ್ಲ. ಆದರೆ ಕೆಲವು ನಿರ್ದಿಷ್ಟ ಹವಾಮಾನ ಸಂದರ್ಭದಲ್ಲಿ ಇವುಗಳು ಅಪರಿಮಿತ ಸಂಖ್ಯೆಯಲ್ಲಿ ಹುಟ್ಟಿಕೊಳ್ಳುತ್ತವೆ. ಅಂಥ ಸಂದರ್ಭದಲ್ಲಿ ಇವು ತಾವು ಹುಟ್ಟಿಕೊಂಡ ಪ್ರದೇಶದಿಂದ ಕೋಟ್ಯಂತರ ಸಂಖ್ಯೆಯಲ್ಲಿ ಚಕ್ರಾಕಾರವಾಗಿ ಹರಡುತ್ತ, ಕೆಳಗಿಳಿದು ಹೊಲಗಳಲ್ಲಿರುವ ಬೆಳೆಗಳನ್ನು ಕ್ಷಣಾರ್ಧದಲ್ಲಿ ತಿಂದು ಧ್ವಂಸ ಮಾಡುತ್ತ, ಅಲ್ಲೇ ಸಂತಾನೋತ್ಪತ್ತಿ ಮಾಡುತ್ತ ಮತ್ತಷ್ಟು ಬೆಳೆಯುತ್ತ ಹೋಗುತ್ತವೆ. ಕೆಲವೊಮ್ಮೆ ಇವು ಒಂದು ಪ್ರದೇಶದ ಆರ್ಥಿಕತೆಯನ್ನೇ ಬದಲಾಯಿಸುವಷ್ಟು ಪ್ರಚಂಡವಾದ ಸುಂಟರಗಾಳಿಯಂತೆ ವರ್ತಿಸುತ್ತವೆ. ಆಗ ಇದನ್ನು 'ಲೋಕಸ್ಟ್ ಪ್ಲೇಗ್' ಎನ್ನಲಾಗುತ್ತದೆ. ಸದ್ಯ ಪಾಕಿಸ್ತಾನ, ಭಾರತ ಮತ್ತು ಇರಾನ್ ಈ ಪ್ಲೇಗ್‌ನ ಭೀತಿಯಲ್ಲಿವೆ.

ಸಾಮಾನ್ಯವಾಗಿ ಈ ಮಿಡತೆಗಳಲ್ಲಿ ನಾಲ್ಕು ವಿಧ– ಮರುಭೂಮಿ ಮಿಡತೆ, ವಲಸೆ ಮಿಡತೆ, ಬಾಂಬೇ ಮಿಡತೆ ಹಾಗೂ ಮರ ಮಿಡತೆ. ಈಗ ಹಾವಳಿ ಎಬ್ಬಿಸುತ್ತಿರುವುದು ಮರುಭೂಮಿ ಮಿಡತೆ. ಇದು ಹುಟ್ಟಿಕೊಂಡಿರುವುದು ಮರುಭೂಮಿ ಪ್ರದೇಶದಲ್ಲಿ. ಹವಾಮಾನ ಇವುಗಳಿಗೆ ಪೂರಕವಾಗಿ ಒದಗಿದಾಗ ಈ ಮಿಡತೆಗಳು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಸಂತಾನೋತ್ಪತಿ ಮಾಡುವುದಲ್ಲದೆ ಹೊಟ್ಟೆ ಹೊರೆಯುವುದಕ್ಕಾಗಿ ಸುತ್ತಮುತ್ತ ಹರಡಲು ಆರಂಭಿಸುತ್ತವೆ.

ಮಿಡತೆ ಹಾವಳಿಯನ್ನು ತಡೆಯುವುದಕ್ಕೆಂದೇ ಪ್ರತ್ಯೇಕವಾದ ಒಂದು ಸಂಸ್ಥೆಯೇ ಭಾರತ ಸರಕಾರದ ಅಡಿಯಲ್ಲಿದೆ– ಮಿಡತೆ ಎಚ್ಚರಿಕೆ ಸಂಸ್ಥೆ (ಎಲ್‌ಡಬ್ಲ್ಯುಒ). ಸಾಕಷ್ಟು ಸುಸಜ್ಜಿತವಾದ ಮುನ್ನೆಚ್ಚರಿಕೆ

ವ್ಯವಸ್ಥೆಗಳು, ಕ್ರಿಮಿನಾಶಕಗಳ ಪೂರೈಕೆ ವ್ಯವಸ್ಥೆ ಇತ್ಯಾದಿಗಳವೆ, ಅಧಿಕಾರಿಗಳದ್ದಾರೆ. ಈ ಅಧಿಕಾರಿಗಳು ಪಾಕಿಸ್ತಾನದ ಕಡೆಯ ಅಧಿಕಾರಿಗಳೊಂದಿಗೆ ಪ್ರತಿವರ್ಷ ಆರು ಗಡಿ ಭೇಟಿಗಳನ್ನು ಏರ್ಪಡಿಸಿಕೊಂಡು, ಸನ್ನಿವೇಶದ ವಿಶ್ಲೇಷಣೆ ನಡೆಸುತ್ತಾರೆ. ಭಾರತದ ಜೋಧ್‌ಪುರ ಹಾಗೂ ಪಾಕಿಸ್ತಾನದ ಕರಾಚಿಗಳ ನಡುವೆ ಈ ಕುರಿತು ನಿರಂತರ ನಿಸ್ತಂತು ಸಂಪರ್ಕವಿರುತ್ತದೆ. 2011ರ ಬಳಿಕ ಭಾರತದಲ್ಲಿ ದೊಡ್ಡ ಪ್ರಮಾಣದ ಮಿಡತೆ ದಾಳಿಯಾಗಿಲ್ಲ. ಇದಕ್ಕೆ ಅತ್ಯಾಧುನಿಕ ತಂತ್ರಜ್ಞಾನಗಳು ಹಾಗೂ ಕ್ರಿಮಿನಾಶಕಗಳು ಕಾರಣವಾಗಿವೆ. 1812 ಹಾಗೂ 1997 ರ ನಡುವೆ ದೊಡ್ಡ ಪ್ರಮಾಣದ ಮಿಡತೆ ಪ್ಲೇಗ್‌ಗಳು ಉಭಯ ಪ್ರದೇಶಗಳಲ್ಲಿ ಸಂಭವಿಸಿದ್ದವು

**2. ಈ ಲೇಖನವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:- 10**

ಇಂದು ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿಯೇ ಒಂದು ಮಹಾಲೋಪವಿದೆ. ಇಂದಿನ ವಿದ್ಯಾಭ್ಯಾಸವು ವಿದ್ಯಾರ್ಥಿಗಳಲ್ಲಿ ಯಾವ ಪುರುಷಾರ್ಥ ಸಾಧನೆಯ, ಸಾಹಸದ ಉತ್ಸಾಹದ ಚಿಲುಮೆಯಾಗದೆ ಕೇವಲ ಯಾಂತ್ರಿಕತೆಯ ಬೋಧನೆಗೆ ಸೀಮಿತವಾಗಿದೆ. ಒಳ್ಳೆಯ ನೈತಿಕ ಶಿಕ್ಷಣ, ಸಂಸ್ಕೃತಿ, ತತ್ವ, ಆದರ್ಶ, ಸಾಹಿತ್ಯಗಳಿಗೆ ಯಾವುದೇ ಬೆಲೆಯೂ ಇಲ್ಲವಾಗಿದೆ. ಒಬ್ಬ ವಿದ್ಯಾರ್ಥಿಯಾಗಿ ಉನ್ನತ ಶಿಕ್ಷಣಕ್ಕೆ ಬಂದಕೂಡಲೇ ಕಲಿಯುವುದು – ನಮ್ಮ ತಂದೆತಾಯಿಗಳುಹಳೆಯ ಸಂಪ್ರದಾಯಕ್ಕೆ ಅಂಟಿಕೊಂಡಿರುವ ಮೂಢರು, ನಮ್ಮ ಅಜ್ಜ ತಾತಂದಿರು ಹುಚ್ಚರು, ಇಂದಿನ ಗುರುಭಕ್ತಿ, ಗೌರವ, ಶ್ರದ್ಧೆಗಳೆಲ್ಲ ಕೇವಲ ಆಷಾಢಭೂತಿತನ, ಶಿಕ್ಷಣವೆಂದರೆ ಬಲವಂತದಿಂದ ನಮ್ಮ ಮೇಲೆ ಹೇರಲ್ಪಡುವ ಬೋಧನೆಗಳು, ನಮ್ಮ ಧರ್ಮ, ಸಂಸ್ಕೃತಿ, ಪರಂಪರೆಗಳು ಕೇವಲ ಮೂಢ ನಂಬಿಕೆಗಳು, ಸುಳ್ಳುಕಂತೆಗಳು ಎಂದು ಹೇಳಿಕೊಂಡು ತಾವು ಮಾತ್ರ ದೇಶದ ಭಾವೀ ಮಹಾನಾಗರಿಕರು, ವಿದ್ಯಾವಂತರು ಎಂದು ಹೇಳಿಕೊಳ್ಳುವ ಪರಿ ನಮ್ಮಲ್ಲಿ ಸಾಮಾನ್ಯವಾಗಿಬಿಟ್ಟಿದೆ. ಈ ವಿದ್ಯಾರ್ಥಿದೆಸೆಯ ಜೀವನದಲ್ಲಿ ತಮಗರಿವಿಲ್ಲದಂತೆಯೇ ಕುಡಿತ, ಸಿಗರೇಟು, ಮೋಜು, ಹೋಟೆಲ್, ಸಿನಿಮಾ, ಹುಡುಗಿ–ಹುಡುಗರ ಸ್ನೇಹದ ಅಲೆದಾಟ, ಅರ್ಥಹೀನ ಪ್ರೇಮ–ಕಾಮಗಳ ಹುಚ್ಚು ಭ್ರಮೆಯಲ್ಲಿ ಇಂದಿನ ಬಹುಪಾಲು ವಿದ್ಯಾರ್ಥಿಗಳು ಅಂಟಿಕೊಂಡು ಒದ್ದಾಡುತ್ತಿರುವುದು ಬಹಳ ಶೋಚನೀಯ ಸಂಗತಿಯೆನ್ನದೆ ವಿಧಿಯಿಲ್ಲ. ಇವರ ಮಧ್ಯೆ ಕೆಲವು ಪ್ರಾಮಾಣಿಕ ವಿದ್ಯಾರ್ಥಿಗಳು ಕೂಡ ತೊಂದರೆಗಳನ್ನು ಅನಿವಾರ್ಯವಾಗಿ ಅನುಭವಿಸುತ್ತಿದ್ದಾರೆ. ಇವನು ಗಾಂಧೀ ಕಣೊ, ಇವನಿಗೆ ತಾಕತ್ತಿಲ್ಲ, ಪುಕ್ಕಲು ಹೃದಯದವ ಎಂದು ಛೇಡಿಸುವ, ಹಾಸ್ಯ ಮಾಡುವ ಪರಿ ಇಂದಿನ ಕಾಲೇಜು ವಾತಾವರಣದಲ್ಲಿ ನಾವು ದಿನನಿತ್ಯ ಕಾಣಬಹುದು. ಈ ತಿಳಿವಳಿಕೆಯನ್ನು ತಿದ್ದಿ ವಿದ್ಯಾರ್ಥಿಗಳಿಗೆ ಅರಿವಿನ ಮಾರ್ಗದರ್ಶನವನ್ನು ತೋರಬೇಕಾದ ಗುರುಗಳ ಪರಂಪರೆಗೂ ಕೊರತೆ ಬಂದಿರುವುದು ಬಹಳ ಸಂಕಟಕರ ವಿಚಾರವಾಗಿದೆ.

**<u>ಪ್ರಶ್ನೆಗಳು:–</u>**

1. ಇಂದಿನ ವಿದ್ಯಾಭ್ಯಾಸ ಕ್ರಮ ಹೇಗಿದೆ?
2. ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಮನೋಭಾವ ಹೇಗಿದೆ?
3. ಬಹುಪಾಲು ವಿದ್ಯಾರ್ಥಿಗಳ ಜೀವನ ಶೋಚನೀಯವಾಗಿರುವುದು ಹೇಗೆ?
4. ಪ್ರಾಮಾಣಿಕ ವಿದ್ಯಾರ್ಥಿಗಳೂ ಯಾವ ಬಗೆಯ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ?
5. ಸಂಕಟಕರ ವಿಷಯ ಯಾವುದು?

**3. ಈ ಕೆಳಗಿನ ವಿಷಯದ ಕುರಿತು 100 ಪದಗಳು ಮೀರದಂತೆ ಪ್ರಬಂಧ ಬರೆಯಿರಿ:– 5**

- ಪ್ರಕೃತಿ ವಿಕೋಪ.

**4. ಈ ಕೆಳಗಿನ ಗಾದೆಗಳನ್ನು ನಿಮ್ಮ ಸ್ವಂತ ವ್ಯಾಕ್ಯಗಳಲ್ಲಿ ವಿಸ್ತರಿಸಿ ಬರೆಯಿರಿ:–** **5**

1. ತುಂಬಿದ ಕೊಡ ತುಳುಕುವುದಿಲ್ಲ.
2. ಮನಸಿದ್ದಲ್ಲಿ ಮಾರ್ಗವಿದೆ.
3. ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ.
4. ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ.
5. ಹಿತ್ತಲ ಗಿಡ ಮದ್ದಲ.

**5. ಈ ಕೆಳಗಿನ ಕಂಡಿಕೆಯನ್ನು ಇಂಗ್ಲೀಷ್ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸಿ:–** **5**

Every religion, Swamy Vivekananda said, helps us to reach the Divine. He says, I do not simply say I tolerate religion. That is an insult to God. I accept all religions, I worship all religions. Every religion helps us to reach God and realize. Nature is something which is very dear to me. I am not prepared to reject any of them. So he criticized the word 'Toleration' which we employ and said "we have to appreciate, we have to accept, we have to take for granted all these religions which helps us to reach the supreme. They belong to one community of spirit, they belong to one fraternity, to one fellowship. It is that kind of religion he asked us to practice.

**6. ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ** **5**

1. ತೇಲು
2. ಪ್ರಾಚೀನ
3. ಹಿನ್ನಡೆ
4. ಸೂರ್ಯಾಸ್ತ
5. ಕುಲವಂತ

**7. ಈ ಕೆಳಗಿನ ವಾಕ್ಯಗಳ ಪದಗಳನ್ನು ಸರಿಯಾಗಿ ಜೋಡಿಸಿ ಅರ್ಥ ಪೂರ್ಣ ವಾಕ್ಯಗಳನ್ನಾಗಿ ಬರೆಯಿರಿ.** **5**

ಅ) ತಮ್ಮ ಕೆಲಸಗಳನ್ನು ನಿಲ್ಲಿಸಿವೆ ಲಾಕ್ ಡೌನ್ ಪರಿಣಾಮ ಎಲ್ಲಾ ಬಗೆಯ ಉದ್ಯಮಗಳು.

ಆ) ಪ್ಯಾನ್ ಕಾರ್ಡ್ ಸೌಲಭ್ಯಕ್ಕೆ ಮಂಜೂರುಮಾಡುವ ಆನ್ ಲೈನ್ ಚಾಲನೆ ನೀಡಲಾಗಿದೆ.

ಇ) ಕೀಟನಾಶಕವನ್ನು ತಡೆಯಲು ಹಾವಳಿಯನ್ನು ಮಿಡತೆ ಸಿಂಪಡಿಸಲು ವ್ಯವಸ್ಥೆ ಮಾಡಲಾಗುವುದು ಡ್ರೋನ್.

ಈ) ಕೊರೊನಾ ತಡೆಯಬಹುದು ಸಾಮಾಜಿಕ ಹರಡುವುದನ್ನು ಅಂತರ ಕಾಯ್ದುಕೊಳ್ಳುವುದರಿಂದ.

ಉ) ಭಾರತಕ್ಕೆ ಕೃಷಿ ವ್ಯವಸ್ಥೆಹೊಂದಿರುವ ಮುಂಗಾರು ಮಳೆಯೇ ಆಧಾರಿತ ಮುಖ್ಯವಾಗಿದೆ.

**8. ಈ ಕೆಳಗಿನ ಪದಗಳಿಗೆ ಸಂಧಿಯ ಹೆಸರನ್ನು ಬರೆಯಿಸಿ:–** **5**

1. ಹಳ್ಳಿಯಿಂದ
2. ಒಳ್ಳೆಯದಲ್ಲ
3. ಮಳೆಗಾಲ
4. ದೇವಾಲಯ
5. ಮಹೋತ್ಸವ

# ಭಾಗ–ಬಿ

**9.** ಮಾರಣಾಂತಿಕ/ ಮಾರಣಾಂತಿಕವಲ್ಲದ ವಿದ್ಯುತ್ ಅಪಘಾತಗಳಲ್ಲಿ ಇಲಾಖೇತರ ವ್ಯಕ್ತಿಗಳಿಗೆ ನೀಡುವ ಪರಿಹಾರ ಹಾಗೂ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟ ಪ್ರಾಣಿಗಳ ಮಾಲೀಕರುಗಳಿಗೆ ನೀಡುವ ಪರಿಹಾರ ಮೊತ್ತ (solatium) ಹೆಚ್ಚಿಸಿರುವ ಬಗ್ಗೆ ನಿರ್ದೇಶಕರು(ಆ&ಮಾಸಂ), ಕವಿಪ್ರನಿನಿ ರವರು ಹೊರಡಿಸಿರುವ ಆದೇಶವನ್ನು ಸಿದ್ಧಪಡಿಸಿ. **10**

**10.** ಬೆವಿಕಂನ ವಿಭಾಗೀಯ ಕಚೇರಿಯಲ್ಲಿ ಸಹಾಯಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ.Y ರವರಿಗೆ, 2 ದಿನಗಳ ಅನಧಿಕೃತ ಗೈರುಹಾಜರಾತಿಗೆ ಸಂಬಂಧಿಸಿದಂತೆ ಕಾರ್ಯನಿವಾಹಕ ಇಂಜಿನಿಯರ್(ವಿ) ರವರಿಂದ ಎಚ್ಚರಿಕೆ ನೀಡಿರುವ ಸೂಚನಾ ಪತ್ರವನ್ನು ಸಿದ್ಧಪಡಿಸಿ. **10**

**11.** Y' ಉಪ ವಿಭಾಗದಲ್ಲಿ ನಡೆದಿದೆ ಎನ್ನಲಾದ ಕಂದಾಯ ಹಣದ ದುರುಪಯೋಗಕ್ಕೆ ಸಂಬಂಧಿಸಿದಂತೆ 'X' ಕಾರ್ಯ ಮತ್ತು ಪಾಲನಾ ವಿಭಾಗದ ಲೆಕ್ಕಾಧಿಕಾರಿ(ಆಂ.ಪ) ಮತ್ತು ತಂಡದವರಿಂದ ವಿಶೇಷ ತನಿಖಾ ವರದಿ ಸಿದ್ಧಪಡಿಸಿ. **10**

**12.** ಉಪಕೇಂದ್ರಗಳ ನಿರ್ಮಾಣಕ್ಕೆ ಋಣಭಾರಗಳಿಲ್ಲದ, ಸೂಕ್ತವಾದ ಸರ್ಕಾರಿ ಜಮೀನುಗಳನ್ನು ಗುರುತಿಸಿ, ಅವುಗಳನ್ನು ಪಡೆಯುವ ಪ್ರಕ್ರಿಯ ಬಗ್ಗೆ ಉಪ ಪ್ರಧಾನ ವ್ಯವಸ್ಥಾಪಕರು( ತಾಂತ್ರಿಕ), ಕ.ವಿ.ಪ್ರ.ನಿ.ನಿ ರವರಿಂದ ಎಲ್ಲಾ ಪ್ರಸರಣ ವಲಯಗಳಿಗೆ ಒಂದು ಕರಡು ಸುತ್ತೋಲೆ ಹೊರಡಿಸಿರಿ. **10**

**13.** ಕಾರ್ಮಿಕ ಕ್ಷೇಮಾಭಿವೃದ್ಧಿ ನಿಧಿಗೆ ದೇಣಿಗೆಯನ್ನು ವೇತನದಲ್ಲಿ ಕಡಿತಗೊಳಸುವ ಬಗ್ಗೆ ಕವಿಪ್ರನಿನಿಯ ನಿರ್ದೇಶಕರು (ಆ ಮತ್ತು ಮಾ.ಸಂ) ರವರಿಂದ,ಎಲ್ಲಾ ಎಸ್ಕಾಂ ಗಳ ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ), ಪಿ.ಸಿ.ಕೆ.ಎಲ್ ಮತ್ತು ಎಲ್ಲಾ ವಿತರಣಾ ವಲಯಗಳ ಮುಖ್ಯ ಇಂಜಿನಿಯರು ಗಳಿಗೆ ಒಂದು ಪತ್ರವನ್ನು ಬರೆಯಿರಿ. **5**

**14.** X' ರವರ ಹೆಸರಿನ ಗ್ರಾಕರಿಂದ 'Y' ಹೆಸರಿನ ಗ್ರಾಹಕರಿಗೆ ಸ್ಥಾವರವನ್ನು ಬದಲಾಯಿಸಿರುವ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ವಿಧಾನಸೌಧ ಉಪ ವಿಭಾಗ, ಬೆ.ವಿ.ಕಂ. ನಿಂದ, ಒಂದು ಅಧಿಕೃತ ಜ್ಞಾಪನಾ ಪತ್ರವನ್ನು ಹೊರಡಿಸಿರಿ. **5**

* * * * * *